# ಸಂಕಲನ

ಪರಿಕಲ್ಪನೆ:

- ಸಣ್ಣ ಸಣ್ಣ ಮಾನಸಿಕ ಸಂಕಲನ ಲೆಕ್ಕ ಮಾಡಿಸುವುದು
- ವಿದ್ಯಾರ್ಥಿಗೆ ಸ್ಥಾನ ಬೆಲೆ ತಿಳಿಸುವುದು

| ಉದಾ: | ಸಾವಿರ | ನೂರು | ಹತ್ತು | ಬಿಡಿ |
|---|---|---|---|---|
| 2847 = | 2 | 8 | 4 | 7 |

ಪರಿಕಲ್ಪನೆಯ ಬೆಳವಣಿಗೆ

- ದಶಕ ರಹಿತ ಸಂಕಲನ

| | ನೂರು | ಹತ್ತು | ಬಿಡಿ |
|---|---|---|---|
| 243 → | 2 | 4 | 3 |
| 324 → | 3 | 2 | 4 |
| | 5 | 6 | 7 |

- ದಶಕ ಸಹಿತ ಸಂಕಲನ

| | ನೂರು | ಹತ್ತು | ಬಿಡಿ |
|---|---|---|---|
| 746 → | 7 | 4 | 6 |
| 567 → | 5 | 6 | 7 |
| ದಶಕ → | 1 | 1 | |
| | 13 | 1 | 3 |

ಅಭ್ಯಾಸ:

(ಮಾನಸಿಕ ಲೆಕ್ಕ)

- ರಾಮನ ಬಳಿ 75 ತೆಂಗಿನ ಕಾಯಿ ಇದೆ 25 ತೆಂಗಿನ ಕಾಯಿ ಸಂತೆಯಿಂದ ತಂದರೆ ಅವನ ಬಳಿ ಇರುವ ಒಟ್ಟು ಕಾಯಿಗಳ ಸಂಖ್ಯೆ ? ( ಈ ರೀತಿಯ ಮಾನಸಿಕ ಲೆಕ್ಕ ಮಾಡಿಸುವುದು)
- ಈ ಕೆಳಗಿನ ರೀತಿ ಲೆಕ್ಕಗಳನ್ನು ಅಭ್ಯಾಸ ಮಾಡಿಸುವುದು.

1) 2 3 4 +<br>
3 4 2<br>
5 □ 6

2) 8 7 5 +<br>
6 4 6<br>
15 □ 1

# ವ್ಯವಕಲನ

ಪರಿಕಲ್ಪನೆ:

- ಸಣ್ಣ ಸಣ್ಣ ಮಾನಸಿಕ ವ್ಯವಕಲನ ಲೆಕ್ಕ ಮಾಡಿಸುವುದು
- ವಿದ್ಯಾರ್ಥಿಗೆ ಸ್ಥಾನ ಬೆಲೆ ತಿಳಿಸುವುದು

| ಉದಾ: | ಸಾವಿರ | ನೂರು | ಹತ್ತು | ಬಿಡಿ |
|---|---|---|---|---|
| 3847 = | 3 | 8 | 4 | 7 |

ಪರಿಕಲ್ಪನೆಯ ಬೆಳವಣಿಗೆ

- ದಶಕ ರಹಿತ ವ್ಯವಕಲನ

| | ನೂರು | ಹತ್ತು | ಬಿಡಿ | |
|---|---|---|---|---|
| 657 → | 600 | 50 | 7 | – |
| 324 → | 300 | 20 | 4 | |
| | 300 | 30 | 3 | |

- ದಶಕ ಸಹಿತ ವ್ಯವಕಲನ:

| | ನೂರು | ಹತ್ತು | ಬಿಡಿ | |
|---|---|---|---|---|
| 843 → | 800 | 40 | 3 | – |
| 685 → | 600 | 80 | 5 | |
| | 100 | 50 | 8 | |

ಅಭ್ಯಾಸ:

(ಮಾನಸಿಕ ಲೆಕ್ಕ)

- ಕೃಷ್ಣನ ಬಳಿ 85 ತೆಂಗಿನ ಕಾಯಿ ಇದೆ 25 ತೆಂಗಿನ ಕಾಯಿಗಳನ್ನು ಸಂತೆಯಲ್ಲಿ ಮಾರಿದರೆ ಅವನ ಬಳಿ ಇರುವ ಉಳಿದ ಕಾಯಿಗಳ ಸಂಖ್ಯೆ ? ( ಈ ರೀತಿಯ ಮಾನಸಿಕ ಲೆಕ್ಕ ಮಾಡಿಸುವುದು)
- ಈ ಕೆಳಗಿನ ರೀತಿ ಲೆಕ್ಕಗಳನ್ನು ಅಭ್ಯಾಸ ಮಾಡಿಸುವುದು.

2) 8 6 4 –<br>
   5 3 2<br>
   3 ☐ 2

2) 8 0 7 –<br>
   6 4 6<br>
   1 ☐ 1

## ಗುಣಾಕಾರ

ಪೂರ್ವಸಿದ್ಧತೆ:

- ಗಣಿತ ತರಗತಿ ಪ್ರಾರಂಭಕ್ಕೆ ಪೂರ್ವದಲ್ಲಿ ಮೊದಲ 2 ನಿಮಿಷ ಸಾಮೂಹಿಕವಾಗಿ ಒಂದು ದಿನಕ್ಕೆ ಒಂದು ಮಗ್ಗಿಯಂತೆ ಮಗ್ಗಿ ಪಠಣ.
- ಅಕ್ಷರದಾಸೋಹ ಸಹಭೋಜನದ(ಸಹಭೋಜನ ವ್ಯವಸ್ಥೆ ಇದ್ದಲ್ಲಿ)ಪ್ರಾರಂಭದಲ್ಲಿ,ಮಂತ್ರ ಪಠಣದ ನಂತರ 2 ನಿಮಿಷಗಳ ಕಾಲ ಸಾಮೂಹಿಕ ಮಗ್ಗಿ ಪಠಣ ದಿನಕ್ಕೆ ಒಂದು ಮಗ್ಗಿಯಂತೆ.

ಪರಿಕಲ್ಪನೆ:

- 

  3 * 3 = 9

  

  5 * 4 = 20

- ಗುಣಾಕಾರವು ಪುನರಾವರ್ತಿತ ಸಂಕಲನ ಎನ್ನುವುದನ್ನು ಅರ್ಥೈಸುವುದು
  ಉದಾ :7+7+7+7+7=35

ಪರಿಕಲ್ಪನೆಯ ಬೆಳವಣಿಗೆ:

- ಒಂದು ಮತ್ತು ಎರಡು ಅಂಕಿಗಳ ದಶಕ ರಹಿತ ಸಂಖ್ಯೆಗಳ ಗುಣಾಕಾರ
  ಉದಾ: 31 * 4 , 50 * 3, 210 * 4
  52 * 22 , 231 * 31 , 102 * 43 ಇತ್ಯಾದಿ.
- ಒಂದು ಮತ್ತು ಎರಡು ಅಂಕಿಗಳ ದಶಕ ಸಹಿತ ಸಂಖ್ಯೆಗಳ ಗುಣಾಕಾರ
  ಉದಾ: 32 * 6 , 55 * 5, 246 * 4
  52 * 36 , 233 * 34 , 105 * 43 ಇತ್ಯಾದಿ.

ಅಭ್ಯಾಸ:

(ಮಾನಸಿಕ ಲೆಕ್ಕ)

ಟೊಮೆಟೊ 1 ಕೆ.ಜಿ–20 ರೂ, ಕ್ಯಾರೆಟ್ 1 ಕೆ.ಜಿ–50 ರೂ, ಆಲೂಗಡ್ಡೆ 1 ಕೆ.ಜಿ–30 ರೂ,

- 2 ಕೆ.ಜಿ ಟೊಮೆಟೊ ಮತ್ತು 3 ಕೆ.ಜಿ ಕ್ಯಾರೆಟ್ ನ ಒಟ್ಟು ಬೆಲೆ ?
- 3 ಕೆ.ಜಿ ಟೊಮೆಟೊ ಮತ್ತು 2 ಕೆ.ಜಿ ಆಲೂಗಡ್ಡೆಯ ಒಟ್ಟು ಬೆಲೆ ?
- ಕೆಲವು ಸಾಮಾಗ್ರಿಗಳ ಅಂಗಡಿ ರಶೀಥಿ ಬಿಲ್ಲು ಸಿದ್ದಪಡಿಸುವುದು
- 1 ರಿಂದ ಹತ್ತರ ವರೆಗೆ ಗುಣಾಕಾರದ ಕೋಷ್ಟಕ ಸಿದ್ದಪಡಿಸುವುದು.

## ಭಾಗಾಕಾರ

ಪರಿಕಲ್ಪನೆ:

- 16 ಲಡ್ಡು ಗಳನ್ನು 4 ಜನ ಸ್ನೇಹಿತರು ಸಮನಾಗಿ ಹಂಚಿಕೊಂಡರೆ



- 40 ರೂಪಾಯಿಗೆ 5 ರೂಪಾಯಿಯ ಎಷ್ಟು ನಾಣ್ಯ ಕೊಡಬೇಕು ?
- ಭಾಗಾಕಾರವು ಪುನರಾವರ್ತಿತ ವ್ಯವಕಲನ ಎನ್ನುವುದನ್ನು ಅರ್ಥೈಸುವುದು

ಪರಿಕಲ್ಪನೆಯ ಬೆಳವಣಿಗೆ:

- ಗುಣಾಕಾರ ಮತ್ತು ಭಾಗಾಕಾರದ ಸಂಬಂಧವನ್ನು ತಿಳಿಸುವುದು.
- ಭಾಜ್ಯ, ಭಾಜಕ, ಭಾಗಲಬ್ಧ ಮತ್ತು ಶೇಷದ ಅರ್ಥ ತಿಳಿಸುವುದು.
- ಒಂದು ಮತ್ತು ಎರಡು ಅಂಕಿಗಳ ಭಾಗಾಕಾರ
  ಉದಾ: 30 / 5 , 80 / 8, 56 / 4 ಇತ್ಯಾದಿ.
- ಒಂದು ಮತ್ತು ಮೂರು ಅಂಕಿಗಳ ಭಾಗಾಕಾರ
  ಉದಾ: 505 / 5 , 104 / 4, ಇತ್ಯಾದಿ.

ಅಭ್ಯಾಸ:

(ಮಾನಸಿಕ ಲೆಕ್ಕ)

- ಒಂದು ತರಗತಿಯಲ್ಲಿ 20 ವಿದ್ಯಾರ್ಥಿಗಳಿದ್ದಾರೆ, ಒಂದು ಬೆಂಚಿನ ಮೇಲೆ 4 ವಿದ್ಯಾರ್ಥಿಗಳಂತೆ ಕುಳಿತರೆ ಬೇಕಾಗುವ ಬೆಂಚುಗಳ ಸಂಖ್ಯೆ.?
- 24 ಕ್ಯಾಂಡಲ್ ಗಳನ್ನು ಪ್ರತಿ ಬಾಕ್ಸಗೆ 3 ರಂತೆ ಜೋಡಿಸಿದರೆ ಬೇಕಾಗುವ ಬಾಕ್ಸಗಳ ಸಂಖ್ಯೆ ?
- ಎರಡು ಮತ್ತು ಮೂರು ಅಂಕಿಗಳ ಭಾಗಾಕಾರವನ್ನು ಅಭ್ಯಾಸ ಮಾಡಿಸುವುದು.

## ಭಿನ್ನರಾಶಿ ಮತ್ತು ದಶಮಾಂಶ

ಪರಿಕಲ್ಪನೆ: ಭಿನ್ನರಾಶಿ ಬಣ್ಣ ಹಾಕಿದ ಭಾಗ




$$\frac{5}{4} = \frac{4}{4} + \frac{1}{4} \qquad \left[\frac{4}{4} = 1\right]$$

$$= 1 + \frac{1}{4}$$

$$= 1\frac{1}{4}$$




- ಚಿತ್ರ ದ ಮೂಲಕ ಭಿನ್ನರಾಶಿಯ ಕಲ್ಪನೆ ಮೂಡಿಸುವುದು
- ಚಿತ್ರದ ಮೂಲಕ ಭಿನ್ನ ರಾಶಿಯ ಸಂಕಲನ ಮತ್ತು ವ್ಯವಕಲನ ವಿವರಿಸುವುದು

ಭಿನ್ನರಾಶಿ ಮತ್ತು ದಶಮಾಂಶದ ಸಂಬಂಧವನ್ನು ಅರ್ಥ ಮಾಡಿಸುವುದು

| | ಭಿನ್ನರಾಶಿ | ದಶಮಾಂಶ |
|---|---|---|
| ದಶಾಂಶ: 10 ಸಮ ಭಾಗದಲ್ಲಿ 1 ಭಾಗ | 1/10 | 0.1 |
| ಶತಾಂಶ: 100 ಸಮ ಭಾಗದಲ್ಲಿ 1 ಭಾಗ | 1/100 | 0.01 |
| ಸಹಸ್ರಾಂಶ:1000 ಸಮ ಭಾಗದಲ್ಲಿ 1 ಭಾಗ | 1/1000 | 0.001 |

# ಕೋನಗಳು

ಪರಿಕಲ್ಪನೆ:

- ಕಾಗದವನ್ನು ಮಡಚುವುದರ ಮೂಲಕ ಕೋನ ಉಂಟಾಗುವ ರೀತಿಯನ್ನು ತೋರಿಸುವುದು
- ಗಡಿಯಾರದ ಮುಳ್ಳುಗಳ ಚಲನೆಯಿಂದ ಉಂಟಾಗುವ ಕೋನಗಳನ್ನು ತಿಳಿಸುವುದು
- ಕಾಗದವನ್ನು ಮಡಚುವುದರ ಮೂಲಕ 0 90,180,270 ಮತ್ತು 360 ಡಿಗ್ರಿ ಕೋನವನ್ನು ಗುರುತಿಸುವುದು



- ಚೌಕಾಕಾರದ ಕಾಗದವನ್ನು ಕರ್ಣದ ಮೇಲೆ ಮಡಚುವುದರ ಮೂಲಕ 45 ಮತ್ತು 135 ಡಿಗ್ರಿ ಗಳನ್ನು ಗುರುತಿಸಲು ತಿಳಿಸುವುದು.

ಪರಿಕಲ್ಪನೆಯ ಬೆಳವಣಿಗೆ:

- 0,45,90,135, ಮತ್ತು 180 ಡಿಗ್ರಿ ಕೋಣಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿದ ಮೇಲೆ ಕೋನದ ಚಿತ್ರ ಬರೆದು,ಕೋನಮಾಪಕದ ಸಹಾಯವಿಲ್ಲದೆ, ಕೋನವನ್ನು ಮನಸ್ಸಿನಲ್ಲಿ ಅಂದಾಜಿಸಿ (ಹತ್ತಿರಕ್ಕೆ) ಬರೆಯುವುದು.
- ಲಘುಕೋನ,ಲಂಬಕೋನ,ವಿಶಾಲಕೋನ,ಸರಳ,ಸರಳಾಧಿಕ ಮತ್ತು ಪೂರ್ಣಕೋನಗಳ ಕಲ್ಪನೆ ನೀಡುವುದು.

ಅಭ್ಯಾಸ:

- ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕೋನಗಳು ಉಂಟಾಗುವ ಸಂದರ್ಭವನ್ನು ಪಟ್ಟಿ ಮಾಡುವುದು
- ನಮ್ಮ ಪರಿಸರದಲ್ಲಿನ ವಸ್ತುಗಳಿಂದ ಏರ್ಪಟ್ಟ ಕೋನಗಳ ವಿಧಗಳನ್ನು ಗುರುತಿಸಿ ಪಟ್ಟಿ ಮಾಡುವುದು
- ಕೋನಮಾಪಕ ಉಪಯೋಗಿಸಿ ಕೋನ ಅಳತೆ ಮಾಡಲು ಕಲಿಸುವುದು.

# ಅಳತೆ

ಪರಿಕಲ್ಪನೆ:

- ಗೇಣು, ಮೊಳ, ಮಾರು ಮತ್ತು ಹೆಜ್ಜೆಗಳಲ್ಲಿ ಅಳತೆಯ ಕಲ್ಪನೆ ಮೂಡಿಸುವುದು
- ಡೆಸ್ಕ,ಬೆಂಚು,ಮೇಜು,ಕಪ್ಪು ಹಲಗೆಯ ಅಳತೆಯನ್ನು ಗೇಣು ಮೊಳ ಮತ್ತು ಮಾರುಗಳಲ್ಲಿ ಮಾಡಿಸುವುದು
- ವಿದ್ಯಾರ್ಥಿಗಳ ತಮ್ಮ ಕೈ ಅಳತೆಗೆ ಅನುಗುಣವಾಗಿ ಗೇಣು,ಮೊಳ ಮತ್ತು ಮಾರುಗಳ ಪರಿವರ್ತನೆ ಸಾಧ್ಯತೆಯನ್ನು ತಿಳಿಸುವುದು

ಪರಿಕಲ್ಪನೆಯ ಬೆಳವಣಿಗೆ:

- ಮಿಲಿಮೀಟರ್–ಸೆಂಟಿಮೀಟರ್–ಮೀಟರ್–ಕಿಲೋಮೀಟರ್ ಗಳ ಸಂಬಂಧವನ್ನು ವಿವರಿಸುವುದು
- ಸೆಂಟಿಮೀಟರ್–ಇಂಚು–ಅಡಿಗಳ ಸಂಬಂಧವನ್ನು ವಿವರಿಸುವುದು

ಅಭ್ಯಾಸ:

- ಡೆಸ್ಕ,ಬೆಂಚು,ಮೇಜು,ಪಠ್ಯಪುಸ್ತಕ,ಕಪ್ಪು ಹಲಗೆಯ ಅಳತೆಯನ್ನು ಸೆಂಟಿಮೀಟರ್ ಮತ್ತು ಇಂಚುಗಳಲ್ಲಿ ಅಳೆದು,ಮೀಟರ್ ಮತ್ತು ಅಡಿಗಳಿಗೆ ಪರಿವರ್ತಿಸವುದು.
- ತರಗತಿ ಕೊಠಡಿಯ ಉದ್ದ ಅಗಲಗಳನ್ನು ಅಳತೆ ಟೇಪುಗಳನ್ನು ಉಪಯೋಗಿಸಿ ಅಳತೆ ಮಾಡಿಸುವುದು.
- ಮೀಟರ್ ನ್ನು ಅಡಿಗಳಿಗೆ ಮತ್ತು ಅಡಿಗಳನ್ನು ಮೀಟರ್ ಗೆ ಪರಿವರ್ತಿಸಲು ತಿಳಿಸಿಕೊಡುವುದು.

# ಕ್ಷೇತ್ರಫಲ

ಪರಿಕಲ್ಪನೆ:

- ಹೆಚ್ಚು ಸ್ಥಳ ಆವರಿಸಿರುವ ವಸ್ತುವನ್ನು ಗುರುತಿಸುವುದು
  ನಾಣ್ಯ–ನೋಟು, ಕಂಪಾಸ್‌ಪೆಟ್ಟಿಗೆ–ಪಠ್ಯಪುಸ್ತಕ, ಕಪ್ಪುಹಲಗೆ–ಗೋಡೆ, ಇತ್ಯಾದಿ.

ಪರಿಕಲ್ಪನೆಯ ಬೆಳವಣಿಗೆ:

ಆಯತ

- 

ಉದ್ದ * ಅಗಲ

5 * 2 = 10

ಚೌಕ



ಉದ್ದ * ಅಗಲ

2 * 2 = 4

ಅಭ್ಯಾಸ:

- ಡೆಸ್ಕ, ಬೆಂಚು, ಮೇಜುಗಳ ಉದ್ದ ಮತ್ತು ಅಗಲಗಳನ್ನು ಗೇಣು, ಮೊಳಗಳಲ್ಲಿ ಅಳತೆ ಮಾಡಿ ವಿಸ್ತೀರ್ಣವನ್ನು ಬರೆಯುವುದು
- ತರಗತಿ ಕೊಠಡಿ, ಆಟದಮೈದಾನದ ಉದ್ದ ,ಅಗಲಗಳನ್ನು ವಿದ್ಯಾರ್ಥಿಗಳ ಹೆಜ್ಜೆಗಳಲ್ಲಿ ಅಳತೆ ಮಾಡಿಸಿ,ಹೆಜ್ಜೆ ಮಾನಗಳಲ್ಲಿಯೂ ಸಹ ವಿಸ್ತೀರ್ಣಗಳನ್ನು ಕಂಡುಹಿಡಿಯುವ ಸಾಧ್ಯತೆಯನ್ನು ತಿಳಿಸುವುದು
- ಮೇಲಿನ ಉದಾಹರಣೆಗಳನ್ನು ಸೆಂಟಿಮೀಟರ್,ಮೀಟರ್ ಮತ್ತು ಅಡಿಗಳಲ್ಲಿ ವಿಸ್ತೀರ್ಣ ಕಂಡು ಹಿಡಿಯುವುದು.

ಗಾತ್ರ

ಪರಿಕಲ್ಪನೆ:

- ಹೆಚ್ಚು ವಸ್ತುಗಳನ್ನು ತುಂಬಿಸಲು ಸಾಧ್ಯವಿರುವ ವಸ್ತುಗಳನ್ನು ಗುರುತಿಸುವುದು
  ಮಗ್-ಬಕೆಟ್, ಲೋಟ- ಡ್ರಮ್ಮ್ , ಬಾವಿ- ಮನೆಯ ನೀರಿನ ಟ್ಯಾಂಕ್ ಇತ್ಯಾದಿ
- ಒಂದು ಸಣ್ಣ ಬಕೆಟ್‌ಗೆ ನೀರನ್ನು ತುಂಬಿಸಲು ಒಂದು ಸಣ್ಣ ಮಗ್ ನಿಂದ ಎಷ್ಟು ಮಗ್ ನೀರು ಹಾಕಬೇಕು.

ಪರಿಕಲ್ಪನೆಯ ಬೆಳವಣಿಗೆ:

- ಮಿಲಿ ಲೀಟರ್ ಮತ್ತು ಮೀಟರ್ ಗಳ ಸಂಬಂಧವನ್ನು ವಿವರಿಸುವುದು
- 1 ಲೀಟರ್ = 1000 ಮಿಲಿ ಲೀಟರ್
- ಲೀಟರ್ ನಿಂದ ಮಿಲಿಲೀಟರ್ ಮತ್ತು ಮಿಲಿ ಲೀಟರ್ ನಿಂದ ಲೀಟರ್ ಗೆ ಪರಿವರ್ತಿಸಲು ತಿಳಿಸುವುದು

ಅಭ್ಯಾಸ:

(ಮಾನಸಿಕ ಲೆಕ್ಕ )

- ಒಂದು ಲೀಟರ್ ಕ್ಯಾನ್‌ಗೆ ನೀರು ತುಂಬಲು 200 ಮಿಲಿ ಲೀಟರ್ ಪಾತ್ರೆಯಿಂದ ಎಷ್ಟು ಬಾರಿ ಸುರಿಯ ಬೇಕು ?
- ಅರ್ಧ ಲೀಟರ್ ಸೀಮೆ ಎಣ್ಣೆ ಡಬ್ಬಿ ತುಂಬಿಸಲು 100 ಮಿಲಿ ಲೀಟರ್ ಪಾತ್ರೆ ಯಿಂದ ಎಷ್ಟು ಬಾರಿ ಸುರಿಯಬೇಕು ?

# ಕಲಿಕೆಯಲ್ಲಿ ಹಿಂದುಳಿಸಿದ ವಿದ್ಯಾರ್ಥಿಗಳಿಗೆ ಪುನಃಶ್ಚೇತನ ಪಠ್ಯ ಕ್ರಮ

## 8 ನೇ ತರಗತಿ

ಪರಿಕಲ್ಪನೆ ಮತ್ತು ನಿರ್ದೇಶನ

ದಿವಾಕರ ಶೆಟ್ಟಿ

ಉಪ ನಿರ್ದೇಶಕರು

ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆ

*******

ಮಾರ್ಗದರ್ಶನ ಮತ್ತು ಸಹಕಾರ

ವಸಂತ ಶೆಟ್ಟಿ

ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ ಉಡುಪಿ ಜಿಲ್ಲೆ

ನಾಗರಾಜ

ಉಪಯೋಜನಾ ಸಮನ್ವಯಾಧಿಕಾರಿಗಳು ಆರ್.ಎಂ.ಎಸ್.ಎ ಉಡುಪಿ ಜಿಲ್ಲೆ

ವೆಂಕಟೇಶ್ ನಾಯಕ

ಸಮಾಜ ವಿಜ್ಞಾನ ವಿಷಯ ಪರಿವೀಕ್ಷಕರು

ಸುಬ್ರಹ್ಮಣ್ಯ ಭಟ್

ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು ಆರ್.ಎಂ.ಎಸ್.ಎ ಉಡುಪಿ ಜಿಲ್ಲೆ

********

ರಚನೆ

ಶಿವಾನಂದ ಮಯ್ಯ

ನಿವೃತ್ತ ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು ಎಸ್.ಎಸ್.ಎ ಉಡುಪಿ ಜಿಲ್ಲೆ

ಬಾಬು ಶೆಟ್ಟಿ ಗಣಿತ ಶಿಕ್ಷಕರು ಸರಕಾರಿ ಪ್ರೌಢ ಶಾಲೆ ಹೆಸ್ಕತ್ತೂರು

ಪ್ರಭಾಕರ ಶೆಣೈ ಗಣಿತ ಶಿಕ್ಷಕರು ನಿರ್ಮಲಾ ಪ್ರೌಢ ಶಾಲೆ ಬ್ರಹ್ಮಾವರ

ಸ್ನೇಹಲತಾ ಮುಖ್ಯ ಶಿಕ್ಷಕರು ಸರಕಾರಿ ಪ್ರೌಢಶಾಲೆ ಕುಚ್ಚೂರು

ಅರುಣ್ ಕುಮಾರ್